

# ಜೇಡಿಮಣ್ಣಿನ ಕಲೆ

**ಚೇತನ್ ಪಾಟಲಿ**

ನಮ್ಮ ಔಪಚಾರಿಕ ಭಾರತೀಯ ಶಾಲಾ ಶಿಕ್ಷಣ ವ್ಯವಸ್ಥೆಯ ಸಂದರ್ಭದಲ್ಲಿ ನಾವು ಪಠ್ಯಕ್ರಮದ ಪ್ರಧಾನ ವಿಷಯಗಳ ಮೇಲೆ ಗಮನಹರಿಸುತ್ತೇವೋ ಅಥವಾ ಸಹ-ಪಠ್ಯಕ್ರಮ ವಿಷಯಗಳ ಮೇಲೆ ಗಮನಹರಿಸುತ್ತೇವೋ ಎಂಬ ಪ್ರಶ್ನೆಯನ್ನು ನಮ್ಮನ್ನು ನಾವು ಕೇಳಿಕೊಂಡರೆ ಅದಕ್ಕೆ ಉತ್ತರ, ಪ್ರಧಾನ ವಿಷಯಗಳು ಎಂದೇ ಆಗಿರುತ್ತದೆ, ಸಹ-ಪಠ್ಯಕ್ರಮ ವಿಷಯಗಳನ್ನು ತೋರಿಕೆಗೆ ಮಾತ್ರ ಕಲಿಸಲಾಗುತ್ತದೆ. ಆದರೆ ಈ ಸಹ-ಪಠ್ಯಕ್ರಮ ವಿಷಯಗಳೂ ಸಹ ಮಗುವಿನ ಸರ್ವಾಂಗೀಣ ಬೆಳವಣಿಗೆಯ ಮೇಲೆ ಬಹಳ ಮುಖ್ಯವಾದ ಪ್ರಭಾವವನ್ನು ಬೀರುತ್ತವೆ.

ಈ ಹಿನ್ನೆಲೆಯಲ್ಲಿ ನೋಡಿದಾಗ, ಕಲೆ ಎನ್ನುವುದು ಒಂದು ಸಹ-ಪಠ್ಯಕ್ರಮ ವಿಷಯವಾಗಿದ್ದು, ಅದನ್ನು ಶಾಲೆಗಳಲ್ಲಿ ಕ್ರಮಬದ್ಧವಾದ ಪಠ್ಯಕ್ರಮ, ವಿನ್ಯಾಸ ಹಾಗೂ ಯೋಜನೆಯೊಂದಿಗೆ ಕಲಿಸುವುದರೊಂದಿಗೆ ಗಟ್ಟಿಗೊಳಿಸಬೇಕಾಗಿದೆ. ಚಿತ್ರಕಲೆ, ವರ್ಣಚಿತ್ರ, ಶಿಲ್ಪಕಲೆ, ಸಂಗೀತ, ನೃತ್ಯ, ನಾಟಕ ಮುಂತಾದ ಪ್ರಕಾರಗಳ ಮೂಲಕ ನಮ್ಮ ಭಾವನೆಗಳು, ವಿಚಾರಗಳು ಹಾಗೂ ಚಿಂತನೆಗಳನ್ನು ಸಂವಹಿಸಲು ಕಲೆಯು ಒಂದು ಪರಿಣಾಮಕಾರಿ ಸಾಧನ.

ಕಳೆದ ನಾಲ್ಕು ವರ್ಷಗಳಿಂದ ನಮ್ಮ ಶಾಲೆಯು, ಶಾಲಾ ವೇಳಾಪಟ್ಟಿಯಲ್ಲಿ ಸಮಯ ಹೊಂದಿಸಿ ವಿವಿಧ ಕಲಾಪ್ರಕಾರಗಳನ್ನು ಕಲಿಸುತ್ತಿದೆ. 2016-2017ರ ಶೈಕ್ಷಣಿಕ ವರ್ಷದಲ್ಲಿ ನಾವು ಎಲ್ಲ ಶಿಕ್ಷಕರು ಒಟ್ಟಿಗೆ ಸೇರಿ ಒಂದು ಕಲಾ ಪ್ರಕಾರವನ್ನು ಪ್ರಾರಂಭಿಕ ಹಂತದಿಂದ ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಪ್ರಯತ್ನಿಸಬೇಕೆಂದು ಆಲೋಚಿಸಿದೆವು. ಯಾವ ರೀತಿಯ ಕಲಾಪ್ರಕಾರವನ್ನು ಮೊಟ್ಟಮೊದಲಿನಿಂದ ಕಲಿಯಲು ಪ್ರಯತ್ನಿಸಬಹುದು ಎಂದು ನಾವೆಲ್ಲ ಒಟ್ಟಿಗೆ ಕುಳಿತು ಚರ್ಚಿಸಿದೆವು. ಈ ಚರ್ಚೆಯಲ್ಲಿ ಎರಡು ವಿಷಯಗಳು ಮುನ್ನೆಲೆಗೆ ಬಂದವು. ಅದರಲ್ಲಿ ಒಂದು ಮರಗೆಲಸ, ಮತ್ತೊಂದು ಜೇಡಿಮಣ್ಣಿನಿಂದ ವಸ್ತುಗಳನ್ನು ತಯಾರಿಸುವುದು. ಸಂಪನ್ಮೂಲಗಳು ಹಾಗೂ ಕಲಿಸಲು ಬೇಕಾದ ಸಂಪನ್ಮೂಲ ವ್ಯಕ್ತಿಗಳ ಲಭ್ಯತೆಯ ಆಧಾರದ ಮೇಲೆ ನಾವು ಜೇಡಿಮಣ್ಣಿನಿಂದ ವಸ್ತುಗಳನ್ನು ತಯಾರಿಸುವುದನ್ನು ಆರಿಸಿಕೊಂಡೆವು.

ಆ ಹಂತದಲ್ಲಿ ನಾನು ಮುಖ್ಯವಾಗಿ ಪ್ರಧಾನ ವಿಷಯಗಳನ್ನು ಹಾಗೂ ಚಿತ್ರಕಲೆ, ವರ್ಣಚಿತ್ರದಂತಹ ಕಲಾ ವಿಷಯಗಳ ಪಠ್ಯಕ್ರಮದ ಒಂದು ಭಾಗವನ್ನು ಕಲಿಸುತ್ತಿದ್ದೆ. ಆದರೆ ಕಲಾ ಪ್ರಕಾರವನ್ನು ಕಲಿಸಲು ನನಗೆ ಯಾವುದೇ ಅರ್ಹತೆಯಾಗಲೀ, ಅನುಭವವಾಗಲೀ ಇರಲಿಲ್ಲ, ಇದ್ದದ್ದು ಆಸಕ್ತಿ ಮಾತ್ರ.

ಕಲೆ ಎಂದರೇನು, ಶಿಕ್ಷಣದಲ್ಲಿ ಅದರ ಪಾತ್ರವೇನು, ಜೇಡಿಮಣ್ಣಿನಿಂದ ವಸ್ತುಗಳನ್ನು ಮಾಡುವುದೆಂದರೇನು, ಅದನ್ನು ಶಾಲೆಗಳಲ್ಲಿ ಕಲಿಸುವುದು ಹೇಗೆ ಮುಂತಾದ ವಿಷಯಗಳ ಬಗ್ಗೆ ನನ್ನ ಜ್ಞಾನ ಮತ್ತು ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಲು ಕಲಾ ವಿಷಯಕ್ಕೆ ಸಂಬಂಧಿಸಿದ ಹೊಸ ಪಠ್ಯಕ್ರಮವನ್ನು ಅಭ್ಯಾಸ ಮಾಡಲಾರಂಭಿಸಿದೆ. ಅನಂತರ ಜೇಡಿಮಣ್ಣಿನಿಂದ ವಸ್ತುಗಳನ್ನು ತಯಾರಿಸುವ ಚಟುವಟಿಕೆಗಳು, ರೀತಿಗಳು, ಅವುಗಳನ್ನು ಎಷ್ಟು ದಿನಗಳಿಗೊಮ್ಮೆ ಮಾಡಿಸಬೇಕು ಮುಂತಾದವನ್ನು ಒಳಗೊಂಡಿರುವಂತಹ ಕಲಾ ತರಗತಿಗಳ ವೇಳಾಪಟ್ಟಿಯನ್ನು ನಾನು ತಯಾರಿಸಿಕೊಂಡೆನು.

ತರಗತಿಗಳನ್ನು ಪ್ರಾರಂಭಿಸುವುದಕ್ಕೆ ಮೊದಲು, ಈ ಚಟುವಟಿಕೆಗಾಗಿ ಸೂಕ್ತವಾದ ಜೇಡಿಮಣ್ಣನ್ನು ನಾವು ಹೊಂದಿಸಿಕೊಳ್ಳಬೇಕಾಗಿತ್ತು. ಆದ್ದರಿಂದ, ನನ್ನ ಬೇರೆ ತಯಾರಿಗಳ ಜೊತೆಗೆ, ನಾನು ನಾಯಿಕಲ್ಲ ಸ್ಥಳೀಯ ಕುಂಬಾರರಾದ ಹನುಮಂತಪ್ಪನವರನ್ನು ಸಂಪರ್ಕಿಸಿದೆನು. ಅವರಿಂದ ಯಾವ ರೀತಿಯ ಜೇಡಿಮಣ್ಣನ್ನು ಬಳಸಬೇಕು, ಅದು ಎಲ್ಲಿ ಲಭ್ಯವಿದೆ, ಜೇಡಿಮಣ್ಣನ್ನು ಹೇಗೆ ಸಿದ್ಧಪಡಿಸಿಕೊಳ್ಳಬೇಕು ಮುಂತಾದ ವಿಷಯಗಳ ಬಗ್ಗೆ ಕೇಳಿ ತಿಳಿದುಕೊಂಡೆನು. ಯಾದಗಿರಿ ಬಳಿಯ ಮುದ್ನಾಳ್ಳಳ್ಳಿಯಿಂದ ಜೇಡಿ ಮಣ್ಣನ್ನು ತರುವಂತೆ ಅವರು ಸಲಹೆಯಿತ್ತರು. ಅನಂತರ ಶಾಲೆಯ ಕಡೆಯಿಂದ ಮುದ್ನಾಳ್ ಪಂಚಾಯತಿ ಸದಸ್ಯರನ್ನು ಸಂಪರ್ಕಿಸಿ, ಸೂಕ್ತವಾದ ಜೇಡಿಮಣ್ಣನ್ನು ಸಂಗ್ರಹಿಸಲು ಅಗತ್ಯವಾದ ಅನುಮತಿಯನ್ನು ಪಡೆದುಕೊಂಡೆವು. ಅನಂತರ ಕ್ಷೇತ್ರಕ್ಕೆ ಭೇಟಿ ನೀಡುವುದೇ ಮೊದಲನೆಯ ತರಗತಿಯಾಗುವಂತೆ ಯೋಜಿಸಿಕೊಂಡೆವು. ಅಲ್ಲಿ ಜೇಡಿಮಣ್ಣನ್ನು ಸಂಗ್ರಹಿಸುವ ಯೋಜನೆ ಹಾಕಿ, ಮಕ್ಕಳೊಂದಿಗೆ ಆ ಭೇಟಿಯ ಉದ್ದೇಶ, ನಾವು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಬೇಕೆಂದು ಆಲೋಚಿಸಿದೆವು. ಕ್ಷೇತ್ರ ಭೇಟಿಯ ಉದ್ದೇಶವೇನಾಗಿತ್ತೆಂದರೆ, ಎಲ್ಲ ರೀತಿಯ ಜೇಡಿಮಣ್ಣುಗಳೂ ವಸ್ತುಗಳನ್ನು ತಯಾರಿಸಲು ಸೂಕ್ತವಲ್ಲ ಹಾಗೂ ಅವುಗಳಿಂದ ವಸ್ತುಗಳನ್ನು ತಯಾರಿಸುವುದು ಸುಲಭವಲ್ಲ ಎಂದು ಮಕ್ಕಳಿಗೆ ಅರ್ಥಮಾಡಿಸುವುದು

ನಿಗದಿಯಾದ ಒಂದು ದಿನ ಐದನೇ ತರಗತಿಯ ಎಲ್ಲ ಮಕ್ಕಳು ಮೂವರು ಶಿಕ್ಷಕರೊಡನೆ ಜೇಡಿಮಣ್ಣನ್ನು ಸಂಗ್ರಹಿಸಿ ತಂದು ಶೇಖರಿಸಿಡಲು ಮುದ್ನಾಳ್ಗೆ ತೆರಳಿದರು. ಈ ಇಡೀ ಪ್ರಕ್ರಿಯೆಯಲ್ಲಿ ನಮ್ಮೊಂದಿಗಿದ್ದು, ಸಹಾಯ ಮಾಡಲು ಒಪ್ಪಿಕೊಂಡಿದ್ದರೂ ಸಹ ಆ ಕುಂಬಾರರು ವೈಯಕ್ತಿಕ ಕಾರಣಗಳಿಂದಾಗಿ ಬರಲಾಗಲಿಲ್ಲ. ಹಾಗಾಗಿ ಆ ಕುಂಬಾರರು ನೀಡಿದ್ದ ನಿರ್ದೇಶನದಂತೆ ನಾನು ಜೇಡಿಮಣ್ಣನ್ನು ಸಿದ್ಧಗೊಳಿಸಲಾರಂಭಿಸಿದೆ. ಮಕ್ಕಳು ಜೇಡಿಮಣ್ಣನ್ನು ಜರಡಿಯಾಡುವ ಮೂಲಕ ಶುದ್ಧಮಾಡಿ, ಒಂದು ನಿರ್ದಿಷ್ಟ ಪ್ರಮಾಣದಲ್ಲಿ ನೀರನ್ನು ಬೆರೆಸಿ, ಕಲಸಿ ಕೊಳೆಯಲು ಬಿಟ್ಟರು. ಎರಡು ಮೂರು ದಿನಗಳಲ್ಲಿ ಜೇಡಿಮಣ್ಣು ವಸ್ತುಗಳನ್ನು ತಯಾರಿಸಲು ಸಿದ್ಧವಾಗಿತ್ತು.

ಅನಂತರ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದಾಗ, ನಾವು ವಿವಿಧ ರೀತಿಯ ಸವಾಲುಗಳನ್ನು ಎದುರಿಸಿದೆವು. ಹಾಗಾಗಿ ಅವುಗಳನ್ನು ತರಗತಿಯಲ್ಲಿ ಮಕ್ಕಳೊಂದಿಗೆ ಚರ್ಚೆ ಮಾಡಿದಾಗ ಕೆಲವು ವಿಚಾರಗಳು ಹೊಳೆದವು. ಎಲ್ಲ ಮುಗಿದ ಅನಂತರ, ನಾವು ಅನುಸರಿಸಿದ ವಿಧಾನಗಳನ್ನು ಕುರಿತು ನಾನು ಮತ್ತು ಮಕ್ಕಳು

ವಿಚಾರ ವಿನಿಮಯ ಮಾಡಿಕೊಂಡೆವು. ಅವರ ಕೆಲವು ಪ್ರತಿಕ್ರಿಯೆಗಳು ಹೀಗಿವೆ:

1. 'ನಾಲ್ಕನೆಯ ತರಗತಿಯಲ್ಲಿದ್ದಾಗ ನಾನು ಜೇಡಿಮಣ್ಣಿನಿಂದ ವಸ್ತುಗಳನ್ನು ಮಾಡುವ ಚಟುವಟಿಕೆಯನ್ನು ಮಾಡಿರಲಿಲ್ಲ. ಹಾಗಾಗಿ, ಜೇಡಿಮಣ್ಣನ್ನು ಸಂಗ್ರಹಿಸಲು ಹೋದಾಗ, ನಾವು ಅದರಿಂದ ಹೇಗೆ ವಸ್ತುಗಳನ್ನು ತಯಾರಿಸುತ್ತೇವೆ ಎಂಬ ಅಂದಾಜಿರಲಿಲ್ಲ. ಆದರೆ ನಾವು ನಿಧಾನವಾಗಿ ಮುಂದುವರಿದಂತೆ ಇದನ್ನು ನಾನು ಮಾಡಬಲ್ಲೆ ಎಂಬ ವಿಶ್ವಾಸಮೂಡಿತು.'
2. 'ಜೇಡಿಮಣ್ಣಿನಿಂದ ವಸ್ತುಗಳನ್ನು ಮಾಡುವ ಮೊದಲು ನಾವು ಒಳಾಂಗಣದಲ್ಲಿ ಚಿತ್ರ ಬಿಡಿಸುವುದು, ವರ್ಣಚಿತ್ರ ರಚಿಸುವುದು ಹಾಗೂ ಕರಕುಶಲ ಕೆಲಸಗಳನ್ನು ಮಾಡುತ್ತಿದ್ದು, ಅದು ನಮಗೆ ಬೇಸರ ಹುಟ್ಟಿಸುತ್ತಿತ್ತು. ಆದರೆ ತರಗತಿಯ ಹೊರಗೆ ಮಾಡುವ ಈ ಕೆಲಸ ನಮಗೆ ಸಂತೋಷವನ್ನು ನೀಡಿತು. ನಾವು ಮಾಡಿದ ವಸ್ತುಗಳನ್ನು ಗ್ರಂಥಾಲಯದಲ್ಲಿ ಪ್ರದರ್ಶನಕ್ಕೂ ಸಹ ಇಟ್ಟೆವು.'
3. 'ಜೇಡಿಮಣ್ಣಿನಿಂದ ವಸ್ತುಗಳನ್ನು ಮಾಡಲು ಪ್ರಾರಂಭಿಸಿದ ಮೊದಲ ದಿನಗಳಲ್ಲಿ, ನನಗೆ ಯಾವುದೇ ವಸ್ತುಗಳನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆಗ ನಾನು ಸುಮ್ಮನೆ ಕುಳಿತು ಕೆಲವು ವಿಚಾರಗಳನ್ನು ಯೋಚಿಸಿದೆ. ಅನಂತರ ಅವುಗಳನ್ನು ಜೇಡಿಮಣ್ಣಿನಲ್ಲಿ ಮಾಡಲು ಪ್ರಯತ್ನಿಸಿದಾಗ, ಅವು ಬಹಳ ಚೆನ್ನಾಗಿ ಮೂಡಿಬಂದವು.'
4. 'ನನಗೆ ಈ ಕೆಲಸ ಬಹಳ ಖುಷಿ ಕೊಟ್ಟಿತು ಏಕೆಂದರೆ ಒಬ್ಬ ಕುಂಬಾರನು ತನ್ನ ಕೆಲಸವನ್ನು ಮಾಡಲು ಯಾವ ಪ್ರಕ್ರಿಯೆಯನ್ನು ಅನುಸರಿಸುತ್ತಾನೋ ಆ ಇಡೀ ಪ್ರಕ್ರಿಯೆಯನ್ನು ನಾವು ಅನುಸರಿಸಿದ್ದೆವು. ಈ ರೀತಿಯಲ್ಲಿ ನಾವೂ ಸಹ ಒಬ್ಬ ಕುಂಬಾರನು ಎಷ್ಟು ಶ್ರಮ ಹಾಕುತ್ತಾನೋ ಅಷ್ಟೇ ಹಾಕಿದ್ದೆವು.'
5. 'ಇಲ್ಲಿಯವರೆಗೂ ನಾವು ಸರಳವಾದ ವಸ್ತುಗಳನ್ನು ಮಾಡಲು ಸಾಧ್ಯವಾಗಿದೆ. ನಮಗೆ ಕುಂಬಾರರ ಬೆಂಬಲ ಸಿಕ್ಕರೆ, ನಾವು ಇನ್ನೂ ಹೆಚ್ಚಿನದನ್ನು ಮಾಡಬಹುದು.'

ಒಬ್ಬ ಸುಗಮಕಾರನಾಗಿ ಎದುರಿಸಿದ ಸವಾಲುಗಳು ಹಾಗೂ ಕಲಿತ ಪಾಠಗಳು ಹೀಗಿವೆ:

1. ಸಂಪನ್ಮೂಲ ವ್ಯಕ್ತಿಯ (ಕುಂಬಾರ) ಅಲಭ್ಯತೆಯಿಂದಾಗಿ ಕೆಲಸ ಪ್ರಾರಂಭಿಸುವುದು ತಡವಾಯಿತು.
2. ಜೇಡಿಮಣ್ಣನ್ನು ತಯಾರಿಸುವಾಗ ಹದವನ್ನು ಕಾಪಾಡಿಕೊಳ್ಳುವುದು ಒಂದು ಸವಾಲಾಗಿತ್ತು. ಕೆಲವು ಸಲ ಜೇಡಿಮಣ್ಣು ತುಂಬ ತೇವವಾಗಿದ್ದರೆ, ಕೆಲವು ಸಲ ಒಣಗಿರುತ್ತಿತ್ತು.
3. ನಾವು ಯಾವ ರೀತಿಯ ವಸ್ತುಗಳನ್ನು ಮಾಡಬೇಕೆಂಬುದರ ಬಗ್ಗೆ ನನ್ನ ಮನಸ್ಸಿನಲ್ಲಿ ಪ್ರಶ್ನೆಯಿತ್ತು.
4. ವಸ್ತುಗಳನ್ನು ತಯಾರಿಸಲು ಮಕ್ಕಳಿಗೆ ವಸ್ತು ವಿಷಯವನ್ನು ನಾನು ಸೂಚಿಸಿದಾಗಲೂ, ಮಕ್ಕಳು ಅದನ್ನು ಹೇಗೆ ಊಹಿಸಿಕೊಂಡು ಅಭಿವ್ಯಕ್ತಿಸುತ್ತಾರೋ ಎಂದು ಸ್ವಲ್ಪ ಆತಂಕವಿತ್ತು.
5. ಈ ಕೆಲಸವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಈ ಕ್ಷೇತ್ರದ ಪರಿಣತರ ಬೆಂಬಲಬೇಕಾಗಿತ್ತು.

ಈ ಪ್ರಕ್ರಿಯೆಯಲ್ಲಿ ನನ್ನ ಕಲಿಕೆ ಗಣನೀಯವಾಗಿದೆ. ನನ್ನ ಕೆಲವು ಅಭಿಪ್ರಾಯಗಳು ಹೀಗಿವೆ:

1. ಈ ಪ್ರಕ್ರಿಯೆಯು ಜೇಡಿಮಣ್ಣನ್ನು ತಯಾರಿಸುವ ವಿಧಾನಗಳನ್ನು ಗುರುತಿಸಲು, ವಸ್ತು ವಿಷಯಗಳನ್ನು ಆರಿಸಲು, ವಸ್ತುಗಳನ್ನು ತಯಾರಿಸಲು ವಿವಿಧ ಬಗೆಯ ಉಪಾಯಗಳನ್ನು ಹುಡುಕಲು ನನಗೆ ಪ್ರೇರೇಪಣೆ ನೀಡಿತು.
2. ಮಕ್ಕಳು ತಮ್ಮ ಕಲ್ಪನೆಯನ್ನು ಮೂರು ಆಯಾಮವುಳ್ಳ ವಸ್ತುಗಳಲ್ಲಿ ಅಭಿವ್ಯಕ್ತಿಸಿದರು. ಇದಕ್ಕೆ ಮೊದಲು ನಾವು ಎರಡು ಆಯಾಮಗಳಲ್ಲಿ ಮಾತ್ರ ಅಭಿವ್ಯಕ್ತಿಸಲು ಪ್ರಯತ್ನಿಸುತ್ತಿದ್ದೆವು. ಇದನ್ನು ಮಕ್ಕಳು ಬಹಳ ಚೆನ್ನಾಗಿ ಮಾಡಿದರು.
3. ಪ್ರತಿಯೊಂದು ಮಗುವೂ ಸಹ ವಸ್ತುಗಳನ್ನು ತಯಾರಿಸುವ ನಿಟ್ಟಿನಲ್ಲಿ ವಿಚಾರಗಳನ್ನು, ಮಾಹಿತಿಯನ್ನು ಸಂಗ್ರಹಿಸುವ












ಕೆಲಸದಲ್ಲಿ ಭಾಗಿಯಾಗಿತ್ತು. ಎಲ್ಲರ ಸಹಕಾರದಿಂದಾಗಿ ಈ ಚಟುವಟಿಕೆ ಮಾಡುವುದಕ್ಕೆ ಸಾಧ್ಯವಾಯಿತು.

4. ಮಕ್ಕಳು ಈ ಪ್ರಕ್ರಿಯೆಯನ್ನು ಮತ್ತು ತಾವು ತಯಾರಿಸುತ್ತಿದ್ದ ವಸ್ತುಗಳನ್ನು ತಮ್ಮದನ್ನಾಗಿಸಿಕೊಳ್ಳತೊಡಗಿದರು, ಈ ಮೂಲಕ ಹೊಣೆಗಾರಿಕೆಯನ್ನು ಬೆಳೆಸಿಕೊಂಡರು. ಮಕ್ಕಳಲ್ಲಿ ಈ ಪ್ರಕ್ರಿಯೆಯ ಒಡೆತನವನ್ನು ನಾವು ಕಾಣಬಹುದಾಗಿತ್ತು.
5. ಕೆಲವು ಮಕ್ಕಳು ತಾವು ಮಾಡಿದ ವಸ್ತುಗಳ ಮೇಲೆ ಕಥೆಗಳನ್ನು ಕಟ್ಟಲಾರಂಭಿಸಿದ್ದರು.
6. ಮಕ್ಕಳು, ಪರಸ್ಪರರು ತಾವು ತಯಾರಿಸಿದ ವಸ್ತುಗಳನ್ನು ಮೆಚ್ಚಿಕೊಳ್ಳಲಾರಂಭಿಸಿದ್ದರು.
7. ಇಲ್ಲಿಯವರೆಗೂ ಚಿತ್ರ ಬಿಡಿಸಲು, ಬಣ್ಣ ಹಾಕಲು ಹಿಂಜರಿಯುತ್ತಿದ್ದ ಮಕ್ಕಳು ಈಗ ಕೈಯಾರೆ ವಸ್ತುಗಳನ್ನು ಮಾಡಲು ಆಸಕ್ತಿ ತೋರಿಸಲಾರಂಭಿಸಿದ್ದರು.
8. ಮಕ್ಕಳ ಭಾಗವಹಿಸುವಿಕೆ ತೃಪ್ತಿಕರವಾಗಿತ್ತು.
9. ಕಲೆಯ ಈ ಹೊಸ ಪ್ರಕಾರದ ಮೇಲೆ ಕೆಲಸ ಮಾಡುತ್ತಿರುವಾಗ ಸುಗಮಕಾರನಾಗಿ ನಾನು ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು ಹಾಗೂ ಈ ಹೊಸ ಪ್ರಕಾರವನ್ನು ಕುರಿತು ಕೆಲವು ಹೊಸ ಉಪಾಯಗಳು ಹೊಳೆದವು.

ಈ ಇಡೀ ಪ್ರಕ್ರಿಯೆಯಲ್ಲಿ ನಮಗಿದ್ದ ಉದ್ದೇಶವೆಂದರೆ ಮಕ್ಕಳನ್ನು ತೊಡಗಿಸಿಕೊಂಡು, ಅವರನ್ನು ನಿರಂತರ ಒಂದು ಹೊಸ ಕಲಾ









ಪ್ರಕಾರಕ್ಕೆ ಪರಿಚಯಿಸುವುದು. ಈ ಪ್ರಕ್ರಿಯೆಯಲ್ಲಿ ನಮ್ಮ ಮುಖ್ಯ ಧ್ಯೇಯ ಇದ್ದದ್ದು ಮಕ್ಕಳು ಹೇಗೆ ಒಂದು ವಿಷಯದ ಬಗ್ಗೆ ಆಲೋಚನೆ ಮಾಡಿ, ಅಭಿವ್ಯಕ್ತಿಸುತ್ತಾರೆ ಎನ್ನುವ ಕಡೆಗಿತ್ತೇ ಹೊರತು ಕೊನೆಗೆ ಅವರು ಏನು ತಯಾರು ಮಾಡುತ್ತಾರೆ ಎನ್ನುವ ಕಡೆಗಲ್ಲ. ಹಾಗೆಯೇ, ಯಾವುದೇ ಹೋಲಿಕೆ ಮಾಡಬಾರದು, ಒಳ್ಳೆಯದಿರಲಿ ಕೆಟ್ಟದಿರಲಿ ಎಂಬುದನ್ನು ಸಹ ನಾನು ತಿಳಿಸಿ, ಖಚಿತಪಡಿಸಿಕೊಂಡಿದ್ದೆ.

ನಾವು ಕಲೆಯನ್ನು ಪ್ರತಿಯೊಂದು ವಿಷಯದ ಅವಿಭಾಜ್ಯ ಅಂಗ ಎಂದು ಪರಿಗಣಿಸಬೇಕು. ವಿವಿಧ ಕಲಾ ಪ್ರಕಾರಗಳನ್ನು ಬಳಸಲು ಎಲ್ಲ ವಿಷಯಗಳಲ್ಲೂ ಬೇಕಾದಷ್ಟು ಅವಕಾಶಗಳಿರುವುದೂ ಸಹ ನಿಜ. ಹೀಗೆ ಮಾಡುವುದರಿಂದ ಕಲಾ ತರಗತಿಗಳಲ್ಲಿ ಮಾತ್ರವಲ್ಲದೆ ಅದರಾಚೆಗೂ ಸಹ ಕಲಾ ಕೌಶಲವನ್ನು ಬೆಳೆಸಿಕೊಳ್ಳಲು ಇದು ನಮಗೆ ಸಹಾಯ ಮಾಡುತ್ತದೆ.

ಈ ರೀತಿಯಲ್ಲಿ ಒಂದು ವರ್ಷದವರೆಗೂ ಜೇಡಿಮಣ್ಣಿನಲ್ಲಿ ಕಲಾತ್ಮಕ ವಸ್ತುಗಳನ್ನು ಮಾಡುವ ಕಲೆಯ ಪಯಣವನ್ನು ಮುಂದುವರಿಸಲಾಯಿತು, ಈ ಕೆಲಸಕ್ಕಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಲು ಹಾಗೂ ವಿಡಿಯೋ ದಾಖಲೀಕರಣ ಮಾಡಲು ಸಹಾಯ ಮಾಡುವ ಮೂಲಕ ನನ್ನನ್ನು ಹಾಗೂ ಈ ಯೋಜನೆಯನ್ನು ಬೆಂಬಲಿಸಿದಕ್ಕಾಗಿ ಅಜೀಂ ಪ್ರೇಮ್ ಜಿ ಶಾಲೆಯ ಯಾದಗಿರಿ ಶಾಖೆಯ ಮುಖ್ಯೋಪಾಧ್ಯಾಯರಿಗೆ ಮತ್ತು ನನ್ನ ಸಹೋದ್ಯೋಗಿಗಳಿಗೆ ನನ್ನ ವಂದನೆಗಳನ್ನು ತಿಳಿಸುತ್ತೇನೆ.

**ಚೇತನ್ ಪಾಟಲಿ:** ಇವರು ಯಾದಗಿರಿಯ ಅಜೀಂ ಪ್ರೇಮ್ ಜಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ.
ಅವರ ಸಂಪರ್ಕ ವಿಳಾಸ: chetan.patali@azimpremjifoundation.org